ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-1 Issue 4, Jan-Feb 2020, 12-16
©*IIMRD*, Mysuru
IIMRD JOURNALS
www.iimrd.com

# ಸಾಮಾಜಿಕ–ಸಾಂಸ್ಕೃತಿಕ ಕ್ಷೇತ್ರದಲ್ಲಿ ಮಹಿಳೆಯರ ಸ್ಥಾನಮಾನ

ಡಾ. ಎಸ್. ಬಿ. ರಾಠೋಡ[1] ಮತ್ತು ವೀಣಾ ಎಲ್. ವೈ[2]

**ಪೀಠಿಕೆ**

ಪ್ರಾಚೀನ ಕಾಲದಲ್ಲಿ ಸ್ತ್ರೀಯರ ಶಿಕ್ಷಣಕ್ಕೆ ಮುಕ್ತ ಅವಕಾಶವಿರಲಿಲ್ಲ. ಆದರೆ ಸಮಾಜದಲ್ಲಿ ಸ್ತ್ರೀಯರಿಗೆ ಅತ್ಯಂತ ಗೌರವದ ಸ್ಥಾನವಿತ್ತು. ಸ್ತ್ರೀಯರನ್ನು ಸಂಸ್ಕೃತಿಯ ಪ್ರತೀಕ ಮತ್ತು ತ್ಯಾಗ ಮೂರ್ತಿ, ಸಾಕಾರ ಮೂರ್ತಿ, ತಾಳ್ಮೆಯ ಭವ್ಯಪರಂಪರೆಗೆ ಕಾರಣವಾದಳು ಎಂದು ಭಾವಿಸುತ್ತಿದ್ದರು. ಋಗ್ವೇದದಲ್ಲಿ ಸ್ತ್ರೀಯರಿಗೆ ಒಂದು ಉನ್ನತವಾದ ಸ್ಥಾನಮಾನವು ಕೊಡಲಾಗಿತ್ತು. ಆದರೆ ಇದಕೊಪ್ಪದ ಮನು 'ನ:ಸ್ತ್ರೀಯಂ ಸ್ವಾತಂತ್ರ್ಯ ಮರ್ಹತಿ' ಅಂದರೆ ಸ್ತ್ರೀಯರಿಗೆ ಅತಿಯಾದ ಸ್ವಾತಂತ್ರ್ಯ ಬೇಡ ಎಂಬುವದು ಮನುವಿನ ವಾದವಾಗಿತ್ತು. ಮತ್ತು ವಿವಾಹಿತ ಮಹಿಳೆಯರಿಗೆ 'ಅರ್ಧಾಂಗಿನಿ' ಎಂಬ ಬಿರುದನ್ನು ಕೊಟ್ಟು ಪ್ರತಿಯೊಂದು ಧಾರ್ಮಿಕ–ಸಾಮಾಜಿಕ ಕಾರ್ಯಗಳಲ್ಲಿ ಪಾಲ್ಗೊಳ್ಳಲು ಅವಕಾಶ ಮಾಡಿಕೊಡಲಾಗಿತ್ತು. ಗುರುಕುಲದಲ್ಲಿ ಅತ್ಯಂತ ಪ್ರಭಾವಶಾಲಿಯಾದ ಸ್ತ್ರೀಯರು ಇರುತ್ತಿದ್ದರು. ಅನುಸುಯಾ, ಅರುಂಧತಿ, ವಿಶ್ವಾವರಾ, ಲೋಪಾಮುದ್ರಾ, ಶಕುಂತಲಾ, ಸೀತಾ, ತಾರಾ, ಮೈತ್ರೇಯಿ, ಯಜ್ಞವಲ್ಕಾ, ಗಾರ್ಗಿ ಹೀಗೆ ಅನೇಕ ಮಹಾನ್ ಮಹಿಳೆಯರಿದ್ದರು. ಗುರುಕುಲದ ಅಧ್ಯಯನ ಅಧ್ಯಾಪನ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಪಾತ್ರವಹಿಸುತ್ತಿದ್ದದ್ದು ಇಲ್ಲಿಯವರೆಗಿನ ಸಂಶೋಧನೆ ಹೇಳುತ್ತದೆ.

ಕರುಣಾಮಹಿಯಾದ ಸ್ತ್ರೀಯರ ಪವಿತ್ರತೆಗೆ ನದಿಗಳ ಹೆಸರನ್ನು ಇಟ್ಟಿರುವುದು (ಗಂಗಾ, ಯಮುನಾ, ಸರಸ್ವತಿ, ಕಾವೇರಿ, ಇತ್ಯಾದಿ.....) ಸ್ತ್ರೀಯರನ್ನು ಪೂಜ್ಯಭಾವದಿಂದ ಎಲ್ಲಿ ಕಾಣುವರೋ ಅಲ್ಲಿ ಮಳೆ–ಬೆಳೆ ಸಮೃದ್ಧಿಯಾಗಿ ಸುಖ–ಶಾಂತಿಗಳು ಲಭಿಸುವದು. ಎಂಬುವದು ಪ್ರಾಚೀನಕಾಲದಲ್ಲಿಯೂ ನಂಬಿಕೆ ಇತ್ತು. ನಾಲ್ಕು ಗೋಡೆಯ ಮಧ್ಯ ಇದ್ದರು ಸ್ತ್ರೀಯರಿಗೆ ಗೌರವ ಭಾವನೆಯಿಂದ ನೋಡುತ್ತಿದ್ದರು. ಆದರೆ ಪುರುಷನಂತೆ ಪೂರ್ಣ ಸ್ವಾತಂತ್ರ್ಯ ದೊರೆಯುತ್ತಿರಲಿಲ್ಲ.

**ಸ್ತ್ರೀಯರಿಗೆ ದೊರೆತ ಸ್ಥಾನಮಾನ:**

ದೇಶ ಬೆಳೆಯಬೇಕಾದರೆ ಸ್ತ್ರೀಯರ ಉನ್ನತ್ತೀಕರಣವಾಗಬೇಕು. ಅವಳಿಗೆ ಕೊಡುವ ಶಿಕ್ಷಣದ ಗುಣಮಟ್ಟವು ಹೆಚ್ಚಿಸಬೇಕು. ಯಾಕೆಂದರೆ "ಮಗುವಿಗೆ ಮನೆಯೇ ಮೊದಲು ಪಾಠಶಾಲೆ" "ತಾಯಿಯೇ ಮೊದಲ ಗುರು" ಎಂಬಂತಹ ನಾಣ್ಣುಡಿಯು ಸ್ತ್ರೀಯರನ್ನು ಪುರುಷರಗಿಂತ ಮೊದಲ ಪಂಕ್ತಿಯಲ್ಲಿ ನಿಲ್ಲಿಸಿದೆ. ಮಹಿಳೆಯೊಬ್ಬಳು ಕಲಿತರೆ ಆಕೆಯಿಂದ ಜನಿಸುವ ಎಲ್ಲಾ ಮಕ್ಕಳು ಕಲಿಯುದರಲ್ಲಿ ಸಂಶಯವೇ

[1] *ಸಹಾಯಕ ಪ್ರಾಧ್ಯಾಪಕರು, ಎಸ್.ಎಸ್.ಕಲಾ ಹಾಗೂ ವಾಣಿಜ್ಯಮಹಾವಿದ್ಯಾಲಯ, ಚಡಚಣ–586205*

[2] *ಸಂಶೋಧನಾ ವಿದ್ಯಾರ್ಥಿನಿ, ಕನ್ನಡ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಬಳ್ಳಾರಿ.*

ಇಲ್ಲ. ಆದರೆ ಪ್ರಾಚೀನ ಕಾಲದಿಂದ ನೋಡಿದರೆ ಸಾಮಾಜಿಕ–ಸಾಂಸ್ಕೃತಿಕ, ರಾಜಕೀಯ ಕಾರಣಗಳಿಂದ ನಮ್ಮ ಸಮಾಜದಲ್ಲಿ ಸ್ತ್ರೀಯರನ್ನು ಕಡೆಗಣಿಸಲ್ಪಟ್ಟಿದ್ದಾರೆ. ಎಂಬುದರಲ್ಲಿ ಸಂಶಯವಿಲ್ಲ ಪುರುಷರಿಗೆ ಹೋಲಿಸಿದರೆ ಶಿಕ್ಷಣ, ಆರೋಗ್ಯ, ಉದ್ಯೋಗ, ಆರ್ಥಿಕ, ಆಡಳಿತ, ರಾಜಕೀಯ ರಂಗಗಳಲ್ಲಿ ಅವರ ಸ್ಥಿತಿಗತಿಗಳು ಇನ್ನೂ ಸಬಲೀಕರಣಗೊಳ್ಳಬೇಕಾಗಿದೆ.

ಸ್ವಾತಂತ್ರ್ಯನಂತರ ಭಾರತದಲ್ಲಿ ಸ್ತ್ರೀಯರ ಸ್ಥಾನಮಾನವನ್ನು ಸುಧಾರಿಸಲು ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ವಿಧವಾ ವಿವಾಹಕ್ಕೆ ಮನ್ನಣೆ, ಬಾಲ್ಯವಿವಾಹಕ್ಕೆ ಕಡಿವಾಣ, ಬಾಲಕಿಯರ ಶಿಕ್ಷಣಕ್ಕೆ ಹೆಚ್ಚಿನ ಗಮನಹರಿಸಲಾಗಿದೆ. ಮಹಿಳೆಯರ ಸಮಸ್ಯೆಗಳನ್ನು ಬಗೆಹರಿಸಲು ಸಮಾಜಿಕ ಕಲ್ಯಾಣ ಮಂಡಳಿ, ಶಿಕ್ಷಣಕ್ಕಾಗಿ ವಯಸ್ಕರ ಶಿಕ್ಷಣ ಕೇಂದ್ರಗಳು ಸಹಾಯಕವಾಗಿವೆ. ಮಹಿಳೆಯರು ತಮ್ಮ ಹಕ್ಕುಗಳನ್ನು ಗುರುತಿಸಿಕೊಳ್ಳವ ಪ್ರಯತ್ನಗಳು ನಡೆದಿವೆ. ಎಂಬುವದರಲ್ಲಿ ಸಂದೇಹವಿಲ್ಲ.

ಸ್ತ್ರೀಪುರುಷರ ತಾರತಮ್ಯವಿದ್ದದು ಶತ ಶತಮಾನಗಳ ಇತಿಹಾಸವಿದೆ. ಈ ಪುರುಷ ಪ್ರಧಾನ ಸಮಾಜದಿಂದಾಗಿ ಮಹಿಳೆ ಅನೇಕ ಅವಕಾಶಗಳಿಂದ ವಂಚಿತಳಾಗಿದ್ದು ಸತ್ಯ. ದ್ವಿತೀಯ ದರ್ಜೆಯ ಪ್ರಜೆಯಂತೆ ಬದುಕು ನಡೆಸುತ್ತಾ ಹೋಗುತ್ತಿರುವುದು ಸತ್ಯ ಈ ಪುರುಷ ಪ್ರಧಾನ ಸಮಾಜವನ್ನು ತುಳಿದು ತಾನು ಮೇಲೆಳುವುದು ಸುಲಭದ ಮಾತಲ್ಲ ಯಾಕೆಂದರೆ ಸ್ತ್ರೀಯು ತನ್ನದೇ ಆದ ಬದುಕಿನ ನಿರ್ಣಯಗಳನ್ನು ತೆಗೆದುಕೊಳ್ಳಲಾಗದಂಥ ಸಮಾಜದ ಕಟ್ಟುಪಾಡುಗಳಲ್ಲಿ ಬಂದಿತಳಾಗಿದ್ದಾಳೆ. ಪ್ರತಿಯೊಂದಕ್ಕೂ ಪುರುಷರನ್ನು ಅವಲಂಬಿಸಿ ಪರಾವಲಂಬಿಯಾಗಿಯೇ ಬದುಕುವ ಅವಳು, ಮುನ್ನುಗ್ಗಿ ಎದ್ದೇಳುವುದು ಕಷ್ಟಕರವಾದ ಕೆಲಸವಾಗಿದೆ.

20 ಮತ್ತು 21 ನೇ ಶತಮಾನದಲ್ಲಿ ಸಾಮಾಜಿಕವಾಗಿ ಹಲವಾರು ಕ್ರಾಂತಿಕಾರಕ ಬದಲಾವಣೆಗಳು ಬಂದಿರುವುದನ್ನು ಕಾಣುತ್ತವೆ. ಈ ಕ್ರಾಂತಿಗೆ ಅನುಗುಣವಾಗಿ ಯಾವ ದೇಶದಲ್ಲಿ ಸ್ತ್ರೀಯು ಗೌರವಿಸಲ್ಪಡುತ್ತಾಳೋ ಅಂತಹ ದೇಶ ಅಭಿವೃದ್ಧಿ ಹೊಂದುವುದು ಎಂಬ ಘೋಷಣೆಯೊಂದಿಗೆ ಸ್ತ್ರೀಯರು ಶೋಷಣೆಗೆ ಒಳಪಡಬಾರದು. ಅವರ ಕಷ್ಟಗಳಿಗೆ ಪುರಷರು ಕಾರಣವಾಗಬಾರದು. ಎಂದರಿತುಕೊಂಡು ಅನೇಕ ಸಂಘಟನೆಗಳು, ಮಹಿಳಾ ಸಂಘಗಳು ಹುಟ್ಟಿಕೊಂಡಿದ್ದು ಇಂದು ನೋಡುತ್ತೇವೆ.

ಪ್ರಾಚೀನ ಕಾಲದ ಸ್ತ್ರೀಯರಿಗೆ ಸ್ಥಾನಮಾನ ಪುರುಷನಷ್ಟೇ ಸಮಾನವಾಗಿತ್ತು. ನಂತರ ದುರ್ಬಲವಾಗುತ್ತಾ ಬಂದವು. ಆವಾಗ ಸ್ತ್ರೀಯರ ಸ್ಥಾನಮಾನವನ್ನು ಸಮಾಜ ಹೀಗೆ ಪರಿಗಣಿಸಿತ್ತು. ಚಿಕ್ಕಂದದಲ್ಲಿ ತಂದೆಯ ಆಶ್ರಯ, ಯುವತಿಯಾದಾಗ ಪತಿಯ ಆಶ್ರಯ, ಮುಪ್ಪಿನ ಕಾಲಕ್ಕೆ ವಿಧವೆಯಾದಾಗ ಮಗನ ಆಶ್ರಯದಲ್ಲಿರಬೇಕು ಎಂಬ ಅಂಶಗಳನ್ನು ಗಮನಿಸಿದಾಗ ಸ್ತ್ರೀಗೆ ಸ್ವಾತಂತ್ರ್ಯವಿರಲಿಲ್ಲ, ಎಂಬುವುದು ತಿಳಿದು ಬರುತ್ತದೆ. ಯಾಕೆಂದರೆ ಅವಳಿಗೆ ಬಾಹ್ಯ ಪ್ರಪಂಚದ ಅರಿವು ಇರಲಿಲ್ಲ ಒಂದು ವೇಳೆ ಇದ್ದಿದ್ದರೆ ಸಮಾಜದ ಕಟ್ಟುಪಾಡುಗಳಿಗೆ ಹೆದರಿ ನಾಲ್ಕುಗೋಡೆಯ ಮಧ್ಯ ಅಸಹಾಯಕಳಾಗಿ ಕುಳಿತುಕೊಳ್ಳುತ್ತಿದ್ದಳು. ಆದರೆ ಇಂದು ಮಹಿಳೆ ಪ್ರತಿಯೊಂದು ಕ್ಷೇತ್ರದಲ್ಲಿ

ಮೇಲುಗೈಯನ್ನು ಸಾಧಿಸಿದ್ದಾಳೆ. ಸಾಮಾಜಿಕ ಸ್ಥಾನಮಾನದೊಂದಿಗೆ ಮಾನವೀಯ ಮೌಲ್ಯದಲ್ಲಿ ಮೆರೆದಿರುವುದನ್ನು ಕಾಣತ್ತೇವೆ.

**ಸ್ತ್ರೀಯರ ಸ್ಥಾನಮಾನ ಮತ್ತು ಶಿಕ್ಷಣದ ಮಹತ್ವ**

ಸ್ತ್ರೀಯರ ಸ್ಥಾನಮಾನ ಹೆಚ್ಚಳಕ್ಕೆ ಶಿಕ್ಷಣವು ಪ್ರಮುಖವಾದ ಪ್ರಾತವಹಿಸುತ್ತದೆ. ಶಿಕ್ಷಣವು ಸ್ತ್ರೀಪುರುಷರಿಬ್ಬರ ನಡುವಿನ ಬೇಧಭಾವಗಳನ್ನು ಕಿತ್ತೊಗೆದು ಅವರ ಸಾಮಾಜಿಕ, ಆರ್ಥಿಕ, ಶಿಕ್ಷಣದ ಜೀವನ ಮಟ್ಟವನ್ನು ಸುಧಾರಿಸಿ, ಹಲವಾರು ಸಾಮಾಜಿಕ ಅನಿಷ್ಠ ಪದ್ಧತಿಗಳಾದ ಜಾತೀಯತೆ, ಲಿಂಗತಾರತಮ್ಯ, ಬಡತನ, ಮೂಢನಂಬಿಕೆ, ಶೋಃಷಣೆ, ಆಶೆ ಆಮಿಷೆಗಳು, ಮುಂತಾದವುಗಳನ್ನು ಹೊಗಲಾಡಿಸಲು ಕಾರಣವಾಗುತ್ತದೆ. ಆರ್ಥಿಕ ಪ್ರಗತಿಯ ಸಿದ್ಧಾಂತಗಳು ಸಹ ಸ್ತ್ರೀ ಶಿಕ್ಷಣ ಹಾಗೂ ಆರ್ಥಿಕ ಪ್ರಗತಿಯ ಮಧ್ಯ ಧನಾತ್ಮಕ ಸಂಬಂಧವನ್ನು ಕಲ್ಪಿಸುತ್ತದೆ. ಆದುದರಿಂದ 1986 ರ ರಾಷ್ಟ್ರೀಯ ಶಿಕ್ಷಣ ನೀತಿಯು "ಶಿಕ್ಷಣವು ಸ್ತ್ರಿಯರ ಸ್ಥಾನಮಾನವನ್ನು ಹೆಚ್ಚಿಸಬೇಕು, ಅವರಿಗೆ ಸರಿಯಾದ ರೀತಿಯ ತರಬೇತಿ ಕೊಡಬೇಕು. ಹಾಗೂ ಅದಕ್ಕಾಗಿ ಹಲವಾರು ರೂಪರೇಷಗಳನ್ನು ಹಾಕಿಕೊಳ್ಳಬೇಕಂದು ಒತ್ತಾಯಿಸಿದೆ" ಮಹಿಳಾ ಶಿಕ್ಷಣವು ಸ್ತ್ರೀಯರ ಸ್ಥಾನಮಾನಗಳನ್ನು ವೃದ್ಧಿಸುವ ಜೊತೆಗೆ ಶಿಶುಮರಣದ ಪ್ರಮಾಣವನ್ನು ನಿಯಂತ್ರಿಸುತ್ತದೆ. ಮಹಿಳೆಯರಲ್ಲಿ ಧನಾತ್ಮಕ ಚಿಂತನೆಗಳಿಂದ ಮನಸ್ಸನ್ನು ಪ್ರಚೋದಿಸಿ, ಸ್ವಾವಲಂಬನೆ, ಸ್ವಾಯತ್ತತೆಗೆ ಪ್ರೇರೆಪಿಸುತ್ತದೆ. ಮಕ್ಕಳು ಹಾಗೂ ಸ್ವತಃ ತಮ್ಮ ಮೂಲಭುತ ಹಕ್ಕುಗಳ ಬಗ್ಗೆ ಹೋರಾಡಲೂ, ಚಿಂತಿಸಲೂ ಹುರಿದುಂಬಿಸುತ್ತದೆ. ಇವೆಲ್ಲದಕ್ಕಿಂತ ಹೆಚ್ಚಾಗಿ ಆರ್ಥಿಕ ಚಟುವಟಿಕೆಯಲ್ಲಿ ಸಹಕಾರಿ ಮನೋಭಾವನೆ ಬೆಳೆಸಿಕೊಂಡು ತೀವ್ರಗತಿಯಲ್ಲಿ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಶಿಕ್ಷಣವು ಬಹಳ ಅವಶ್ಯಕತೆ ಎಂದು ಹೇಳಬಹುದು.

**ಲಿಂಗ ತಾರತಮ್ಯ**

ಇಪ್ಪತ್ತೊಂದನೇ ಶತಮಾನದಲ್ಲಿ ಲಿಂಗ ತಾರತಮ್ಯದ ಒಂದು ಧ್ವನಿಯು ಕೂಡಾ ಇದೆ. ಮನೆಯಲ್ಲಿಯೇ ಗಂಡು ಮಕ್ಕಳನ್ನು ಪ್ರೋತ್ಸಾಹಿಸಿ, ಹೆಣ್ಣು ಮಕ್ಕಳನ್ನು ನಿರ್ಲಕ್ಷ್ಯಭಾವದಿಂದ ನೋಡುವದು. ಈ ಪ್ರವೃತ್ತಿಯು ಪಟ್ಟಣಗಳಕ್ಕಿಂತ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಹೆಣ್ಣು ಮಕ್ಕಳನ್ನು ಬೇಗನೀ ಶಾಲೆ ಬಿಡಿಸಿ ಮನೆಗೆಲಕ್ಕೋ ಅಥವಾ ಚಿಕ್ಕ ಮಕ್ಕಳನ್ನು ನೋಡಿಕೊಳ್ಳಲಿಕ್ಕೋ ಇಲ್ಲವೇ ಸಂಪ್ರದಾಯದ ಪ್ರಕಾರ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಕಳುಹಿಸಿಕೊಡದೆ ಇರುವದಕ್ಕೊ ಅಥವಾ ಮನೆಯಲ್ಲಿ ಬಡತನವಿರುವದರಿಂದ ಹೆಣ್ಣು ಮಕ್ಕಳನ್ನು ಶಾಲೆ ಬಿಡಿಸಿ, ಕೇವಲ ಗಂಡು ಮಕ್ಕಳನ್ನು ಶಾಲೆಗೆ ಕಳುಹಿಸಿ, ಸ್ವಲ್ಪ ಮಟ್ಟಿಗೆ ಖರ್ಚನ್ನು ನಿಯಂತ್ರಿಸಲು ಯತ್ನಿಸುವುದು. ಹೆಣ್ಣು ಮಕ್ಕಳನ್ನು ಶಾಲೆ ಬಿಡಿಸಿ ಬೇಗ ಮದುವೆ ಮಾಡಿಕೊಡುವುದು. ಈ ರೀತಿ ಹೆಣ್ಣಿಗೂ ಗಂಡಿಗೂ ಇರುವ ತಾರತಮ್ಯ ಇದು ಹೆಣ್ಣಿನ ಸ್ಥಾನಮಾನಕ್ಕೆ ಅಗೌರವ ತೋರಿಸಿದಂತಾಗುತ್ತದೆ. ಆದ್ದರಿಂದ ಈ ಜಾಗತೀಕರಣ ಸಂದರ್ಭದಲ್ಲಿ ಈ ತಾರತಮ್ಯವನ್ನು ಕಿತ್ತೊಗೆಯಬೇಕು. ಅಂದರೆ ಹೆಣ್ಣಿಗೆ ಒಂದು ಭದ್ರವಾದ ನೆಲೆ ದೊರಕಿದಂತಾಗುವದು.

ಹೆಣ್ಣು ಮಕ್ಕಳು ಹೆಚ್ಚು ಕಲಿತರೆ, ಅವಳಿಗೆ ಉತ್ತಮ ಉದ್ಯೋಗ ಸಿಗಬಹುದು. ಮತ್ತೆ ಉದ್ಯೋಗವಂತ ಪುರುಷನನ್ನು ಹುಡುಕುವದು ತಂದೆ–ತಾಯಿಯರ ಅಳಲು, ಇದು ತಂದೆ ತಾಯಿಯರ

ದುರಾಲೋಚನೆಯೇ ಸರಿ. ಕೆಲವು ಸಂದರ್ಭದಲ್ಲಿ ಹೆಣ್ಣು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯವಾಗಬಹುದು ಎಂಬುದು ಪೋಷಕರ ಅಳಲು. ಇನ್ನು ಧಾರ್ಮಿಕ ಕಟ್ಟಳೆಗಳು, ಅಂದರೆ ಕೆಲ ಧರ್ಮಗಳಲ್ಲಿ ಹೆಣ್ಣುಮಕ್ಕಳನ್ನು ಪುರುಷರಗಿಂತ ಕೆಳ ಮಟ್ಟದಲ್ಲಿ ಕಾಣುವುದು. ಮತ್ತು ಶಾಲೆಗಳು ದೂರವಿರುವದರಿಂದ ಹೆಣ್ಣುಮಕ್ಕಳನ್ನು ಹೇಗೆ ಕಳುಹಿಸುವುದು. ಈ ರೀತಿ ವಿಚಾರಗಳು ಹೊಳೆದು ಹೆಣ್ಣನ್ನು ಮೂಲಿಗುಂಪು ಮಾಡಿರುವುದು ನಾವುಗಳೇ. ಅದಕ್ಕೆ ನಾವು ಎಚ್ಚತ್ತುಕೊಂಡು ಹೆಣ್ಣು–ಗಂಡು ಎಂಬ ತಾರತಮ್ಯವನ್ನು ನಮ್ಮ ಮನಸ್ಸಿನಿಂದ ದೂರಸರಿಸಿ ಅವಳಿಗೆ ಸಿಗಬೇಕಾದ ಸೌಲಭ್ಯವನ್ನು ಕಲ್ಪಿಸಿಕೋಡಬೇಕು.

**ಸ್ತ್ರೀಯರು ಬಲಿಷ್ಠಗೊಳ್ಳಲು ಪೂರಕಂಶಗಳು**

- ಮಹಿಳೆಯರು ಗಂಡುಮಕ್ಕಳ ಫಲಾಪೇಕ್ಷವನ್ನು ಬಿಟ್ಟು, ಹೆಣ್ಣು ಭ್ರೂಣಹತ್ಯೆಯನ್ನು ತಡೆಯಬೇಕು. ಈ ನಿಟ್ಟಿನಲ್ಲಿ ಇರುವ ಕಾನೂನನ್ನು ಬಲಿಷ್ಟಗೊಳಿಸುವುದರ ಜೊತೆಗೆ ಅರಿವು ಮೂಡಿಸುವುದು ಅಗತ್ಯವಾಗಿದೆ.
- ಮಹಿಳೆಯರಿಗೆ ಸಂಬಂಧಿಸಿದಂತೆ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ರಂಗಗಳಲ್ಲಿ ಸಮಾನ ಅವಕಾಶಗಳಿಗಾಗಿ ಕಾನೂನಾತ್ಮಕ ಹಕ್ಕುಗಳು ಅವರಿಗೆ ದೊರೆಯಲೇಬೇಕು. ಇದಕ್ಕಾಗಿ ಮಹಿಳ ಸಂಘಟನೆಗಳು ಸದೃಢಗೋಳ್ಳಬೇಕು.
- ಶಿಕ್ಷಣ ರಂಗದಲ್ಲಿ ಸಂವಿಧಾನಾತ್ಮಕ ಹಕ್ಕುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಸುವುದು.
- ಹೆಣ್ಣು ಮಕ್ಕಳು ಕಲಿಯಲು ಅನುಕೂಲ ಇರುವ ಹಾಗೆ ಶಾಲೆಗಳನ್ನು ಪ್ರತಿಗ್ರಾಮಗಳಲ್ಲಿ ತೆರೆಯಬೇಕು.
- ಸರಿಯಾದ ಸಾರಿಗೆ ವ್ಯವಸ್ಥೆ ಗ್ರಾಮೀಣ ಪ್ರದೇಶಗಳಿಗೆ ಕಲ್ಪಿಸುವುದು.
- ಗ್ರಾಮೀಣ ಪ್ರದೇಶದ ಪೋಷಕರಿಗೆ ಸ್ತ್ರೀ ಶಿಕ್ಷಣದ ಬಗ್ಗೆ ಅರಿವು ಮೂಡಿಸುವುದು ಅತ್ಯಅವಶ್ಯ.
- ಮಹಿಳೆಗೆ ಸ್ವಯಂ ರಕ್ಷಿತ ಶಿಕ್ಷಣದ ಅವಶ್ಯಕತೆ ಕುರಿತು ಪಾಲಕ, ಪೋಷಕರಲ್ಲಿ ಅರಿವು ಮೂಡಿಸುವುದು.

ಹೀಗೆ ಹಲವಾರು ಕಾರ್ಯಕ್ರಮಗಳ ಮುಖಾಂತರ ಅರಿವು ಮೂಡಿಸಿ, ಸ್ತ್ರೀಯರೊಳಗಿರುವ ಬಲಿಷ್ಟ ಶಕ್ತಿಯನ್ನು ಹೊರಗೆಳೆದು, ಸಮಾಜದಲ್ಲಿ ಅವಳಿಗೆ ಉನ್ನತವಾದ ಸ್ಥಾನವನ್ನು ದೊರಕಿಸುವಂತೆ ಮಾಡುವುದು ಪ್ರಮುಖ ಉದ್ದೇಶವಾಗಿದೆ.

**ಉಪಸಂಹಾರ**

ಒಟ್ಟಿನಲ್ಲಿ ಮಹಿಳೆಯ ಸ್ಥಾನಮಾನ ಗಟ್ಟಿಗೊಳ್ಳಬೇಕಾದರೆ ಅವಳು ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕಾನೂನುಬದ್ಧವಾಗಿ ದೊರೆಯಬೇಕಾದ ಎಲ್ಲ ಸೌಕರ್ಯಗಳು ದೊರೆಯಲೇಬೇಕು. ಗ್ರಾಮೀಣ ಪ್ರದೇಶದಲ್ಲಿ ಇರುವ ಮಹಿಳೆಯ ಕುಂದುಕೊರತೆ ವಿಚಾರಿಸಲು ಸರಕಾರ ವಿಶೇಷ ತಂಡಗಳನ್ನು ರಚನೆ ಮಾಡಬೇಕು. ಅವರ ಸಮಸ್ಯಗಳಿಗೆ ಪೂರ್ಣ ಪರಿಹಾರ ನೀಡಬೇಕು.

**ಪರಾಮರ್ಶನ ಗ್ರಂಥಗಳು**


- ಚಿಕ್ಕೇರೂರ ಧೀರೇಂದ್ರಾಚಾರ್ಯ (2009). ನನ್ನ ಸಾಹಸ (ಕಿರಣ ಬೇಡಿಯ ಆತ್ಮಕಥನ). ಸಾಧನಾ ಪ್ರಕಾಶನ, ಬೆಂಗಳೂರು.
- ಸುಮಿತ್ರಾಬಾಯಿ ಬಿ.ಎನ್. (2006). ಸ್ತ್ರೀವಾದ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
- ಶೇಖರ ಎಂ.ಎಸ್.(2007). ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಮಹಿಳಾಪರ ಕಾಳಜಿಗಳು. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.


IIMRD JOURNALS